ಇ) ರಾಜ್ಯದ ಇತರೆ ಅಕಾಡೆಮಿಗಳಿಗೆ ನೀಡುತ್ತಿರುವಂತೆ ತುಳು ಸಾಹಿತ್ಯ ಹಾಗೂ ಕೊಂಕಣಿ ಸಾಹಿತ್ಯ ಅಕಾಡೆಮಿಗಳಿಗೂ ಕಳೆದ ಸಾಲಿನಿಂದ ಅನುದಾನವನ್ನು ದ್ವಿಗುಣಗೊಳಿಸಿ ವಾರ್ಷಿಕ ತಲಾ ರೂ.40.00 ಲಕ್ಷಗಳ ಅನುದಾನವನ್ನು ನೀಡಲಾಗುತ್ತಿದೆ. ಈ ಅನುದಾನವನ್ನು ತುಳು ಮತ್ತು ಕೊಂಕಣಿ ಭಾಷೆಗಳ ಅಭಿವೃದ್ಧಿಗೆ ಸಂಬಂಧಿಸಿದ ಕಾರ್ಯಚಟುವಟಿಕೆಗಳಿಗೆ ವಿನಿಯೋಗಿಸಲಾಗಿದೆ. ಕಳೆದ ಸಾಲಿನಲ್ಲಿ ವಿಶ್ವ ತುಳು ಸಮ್ಮೇಳನಕ್ಕೆ ರೂ.1.00 ಕೋಟಿ ಅನುದಾನ ನೀಡಲಾಗಿದೆ.

ಈ) ಸರ್ಕಾರದ ಕ್ರಿಯಾ ಯೋಜನೆಯಲ್ಲಿ ಯಕ್ಷಗಾನ ಮತ್ತು ತುಳು ನಾಟಕ ಮಂಡಳಿಗೆ ಸೇರಿದಂತೆ ನೊಂದಾಯಿತ ಸಂಘ-ಸಂಸ್ಥೆಗಳಿಗೆ ವಾರ್ಷಿಕ ಚಟುವಟಿಕೆಗಳಿಗೆ ಅನುದಾನ ನಿಗದಿಪಡಿಸಿ ಬಿಡುಗಡೆ ಮಾಡಲಾತ್ತಿದೆ. ಸಾಂಸ್ಕೃತಿಕ ಸೌರಭ ಯೋಜನೆಯಡಿ ಹಿರಿಯ ಕಲಾವಿದರಿಗೆ ನಾಟಕಗಳು, ಯಕ್ಷಗಾನ, ಪೌರಾಣಿಕ ನಾಟಕಗಳು ಸೇರಿದಂತೆ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ತಲಾ ರೂ.22.000/-, ನಿರ್ವಹಣೆಗೆ ರೂ.2,500/-ಗಳಂತೆ ಮತ್ತು ಕಲಾವಿದರಿಗೆ ಪ್ರಯಾಣ ವೆಚ್ಚ ಜಿಲ್ಲೆಗೆ ತಲಾ ರು.10,000/- ಗಳಂತೆ ಮತ್ತು ಯುವ ಸೌರಭ ಯೋಜನೆಯಡಿ ಯುವ ಕಲಾವಿದರಿಗೆ ಯಕ್ಷಗಾನ, ಪಾರಿಜಾತ ಮುಂತಾದ ಕಾರ್ಯಕ್ರಮಗಳಿಗೆ ತಲಾ ರೂ.10,000/- ಹಾಗೂ ಚಿಗುರು ಯೋಜನೆಯಡಿ ಮಕ್ಕಳಿಗಾಗಿ ಯಕ್ಷಗಾನ ಬೊಂಬೆಯಾಟ ಮುಂತಾದ ಸಮೂಹ ಕಾರ್ಯಕ್ರಮಗಳಿಗೆ ನಿರ್ವಹಣಾ ವೆಚ್ಚ ಸೇರಿ ಒಟ್ಟು ರೂ.12,500/-ಗಳನ್ನು ನೀಡಲಾಗುತ್ತಿದೆ.

ಕೆಳದಿ ಉತ್ಸವ ನಡೆಸುವುದು

784(1293) ಶ್ರೀ ಗೋಪಾಲಕೃಷ್ಣ ಬೇಳೂರು ಎಂ ಎಲ್ ಎ:(ಸಾಗರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾಗರ ತಾಲ್ಲೂಕಿನ ಕೆಳದಿಯಲ್ಲಿ ಕೆಳದಿ ಉತ್ಸವ ನಡೆಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ:

ಆ) ಹಾಗಿದ್ದಲ್ಲಿ, ಕೆಳದಿ ಉತ್ಸವವನ್ನು ಯಾವಾಗ ನಡೆಸಲಾಗುವುದು; ನಡೆಸಲು ಸರ್ಕಾರಕ್ಕಿರುವ ತೊಡಕುಗಳೇನು:

ಇ) ಹಾಗಿಲ್ಲದಿದ್ದಲ್ಲಿ, ಕಾರಣಗಳೇನು?

ಬಿ ಎಸ್ ಯಡಿಯೂರಪ್ಪ(ಮುಖ್ಯಮಂತ್ರಿಗಳು)

ಅ) ಇಲ್ಲ.

ಆ) 2010–11ನೇ ಸಾಲಿನ ಆಯವ್ಯಯದ ಕ್ರಿಯಾ ಯೋಜನೆಯಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಸಹ್ಯಾದ್ರಿ ಉತ್ಸವಕ್ಕೆ ರೂ.30.00 ಲಕ್ಷಗಳನ್ನು ಅನುದಾನ ಒದಗಿಸಿಕೊಂಡಿರುವುದರಿಂದ ಕೆಳದಿ ಉತ್ಸವಕ್ಕೆ ಅನುದಾನವನ್ನು ಒದಗಿಸಿಕೊಂಡಿಲ್ಲ.

ಇ) ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಆಯಾ ಕ್ಷೇತ್ರದ ಸಾಂಸ್ಕೃತಿಕ ವೈಭವವನ್ನು ಪರಿಚಯಿಸಲು ಜಿಲ್ಲೆಗೆ ಒಂದರಂತೆ ಜಿಲ್ಲಾ ಉತ್ಸವಗಳನ್ನು ಹಮ್ಮಿಕೊಳ್ಳಲು ಅವಕಾಶ ಮಾಡಿ ಕೊಳ್ಳಲಾಗಿದೆ. ಅಂತೆಯೇ ಶಿವಮೊಗ್ಗ ಜಿಲ್ಲೆಯಲ್ಲಿ ಸಹ್ಯಾದ್ರಿ ಉತ್ಸವ ಮಾಡಲು ಅವಕಾಶ ಮಾಡಿಕೊಳ್ಳಲಾಗಿದೆ.

ಹೊಸ ಬಡಾವಣೆಗಳ ನಿರ್ಮಾಣ ವಿವರ

785(569) ಶ್ರೀ ಹ್ಯಾರೀಸ್ ಎನ್ ಎ:(ಶಾಂತಿನಗರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ನಿವೇಶನ ರಹಿತರ ಕೊರಗು ನೀಗಿಸಲು ಐದು ಹೊಸ ಬಡಾವಣೆಗಳನ್ನು ನಿರ್ಮಿಸುವ ಸರ್ಕಾರದ ಯೋಜನೆಯ ಪ್ರಗತಿಯ ವಿವರಗಳೇನು;

ಆ) ಈ ನೂತನ ಬಡಾವಣೆಗಳನ್ನು ಕಾಲಮಿತಿಯಲ್ಲಿ ನಿರ್ಮಿಸಲು ಸರ್ಕಾರ ಹಮ್ಮಿಕೊಂಡ ಕ್ರಮಗಳೇನು;

ಇ) ಈ ಯೋಜನೆಗಾಗಿ ಸರ್ಕಾರ ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿರುವ ಜಮೀನಿನ ವಿಸ್ತೀರ್ಣವೆಷ್ಟು; ಎಷ್ಟು ನಿವೇಶನಗಳನ್ನು ಹಂಚಲು ಉದ್ದೇಶಿಸಲಾಗಿದೆ;